# ರೊಮ್ಯಾಂಟಿಕ್ ಕಾಮಿಡಿ ಒಲವಿನ ಸಾತ್ವಿಕಾ

■ ಸುಮಲತಾ ಎನ್



‘ರೋಸ್’ ಸಿನಿಮಾ ಮೂಲಕ ಜನಮನ ಗೆದ್ದು ಕನ್ನಡ ಸೇರಿದಂತೆ ತೆಲುಗಿನ ಹಲವು ಚಿತ್ರಗಳಲ್ಲಿ ಅಭಿನಯಿಸಿರುವ ನಟಿ ಸಾತ್ವಿಕಾ ಇದೀಗ ‘ಕನಸೊಂದು ಶುರುವಾಗಿದೆ’ ಮೂಲಕ ಮತ್ತೆ ತೆರೆಗೆ ಬಂದಿದ್ದಾರೆ. ಇದೇ ವೇಳೆ ತಮ್ಮ ಸಿನಿಮಾ ಜೀವನದ ಬಗ್ಗೆ ಮಾತು ಹಂಚಿಕೊಂಡಿದ್ದಾರೆ.

◆ ‘ಕನಸೊಂದು ಶುರುವಾಗಿದೆ’ ಸಿನಿಮಾದಲ್ಲಿ ನಿಮ್ಮ ಪಾತ್ರ ಏನು ಹೇಳುತ್ತದೆ?

ಸಿನಿಮಾದಲ್ಲಿ ನನ್ನ ಕ್ಯಾರೆಕ್ಟರೈಸೇಷನ್ ತುಂಬಾ ಗಟ್ಟಿಯಾಗಿದೆ. ಇದೇ ಕಾರಣಕ್ಕೆ ಈ ಪಾತ್ರವನ್ನು ಒಪ್ಪಿದೆ. ಸಮಾಜದಲ್ಲಿ ಬದಲಾವಣೆ ತರಬೇಕು ಎಂಬ ಹಂಬಲದ ಪಾತ್ರ. ಒಂದು ಸಾಮಾಜಿಕ ಕಾರಣಕ್ಕಾಗಿ ನ್ಯಾಯಪರವಾಗಿ ಹೋರಾಡುವಂಥ ಹುಡುಗಿಯಾಗಿ ತೆರೆ ಮೇಲೆ ಬರುತ್ತಿದ್ದೇನೆ.

◆ ಕನ್ನಡ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುವುದು ಕಡಿಮೆಯಾಗಿದೆಯಲ್ಲ?

ನನ್ನ ‘ಬ್ಯಾಂಗ್’ ಸಿನಿಮಾ 2023ರಲ್ಲಿ ತೆರೆಕಂಡಿತ್ತು. ಸಿನಿಮಾಗಳಿಂದ ದೂರ ಉಳಿದಿಲ್ಲ. ಮೂರು ವರ್ಷಗಳಿಂದಲೂ ಸಿನಿಮಾಗಳ ಚಿತ್ರೀಕರಣದಲ್ಲಿ ತೊಡಗಿಕೊಂಡಿದ್ದೇನೆ. ಅವೆಲ್ಲ ಈಗ ಒಂದೊಂದಾಗಿ ಬಿಡುಗಡೆಯಾಗುತ್ತಿವೆ.

◆ ನಿಮ್ಮ ಹೆಸರು ಬದಲಿಸಿಕೊಂಡ ಹಿಂದಿನ ಕಾರಣ?

ಸಂಖ್ಯಾಶಾಸ್ತ್ರದ ಕಾರಣ ಶ್ರಾವ್ಯಾ ಎಂದಿದ್ದ ನನ್ನ ಹೆಸರನ್ನು ‘ಸಾತ್ವಿಕಾ’ ಆಗಿ ಬದಲಿಸಿಕೊಂಡಿದ್ದೇನೆ. ಹೊಸ ಹೆಸರಿನ ಜೊತೆ ಹೊಸ ಜೀವನ, ಹೊಸ ಹುರುಪು ಆರಂಭವಾಗಿದೆ. ಸಿನಿಮಾರಂಗದಲ್ಲಿ ಹೊಸ ಹಾದಿಯೂ ತೆರೆದುಕೊಂಡಿದೆ.

◆ ಯಾವ ರೀತಿಯ ಪಾತ್ರಗಳು ನಿಮ್ಮನ್ನು ಸೆಳೆಯುತ್ತವೆ?

ಒಂದು ಸಿನಿಮಾದಲ್ಲಿ ನನ್ನ ಪಾತ್ರ ಒಂದು ಬದಲಾವಣೆಗೆ ಪ್ರೇರಣೆ ನೀಡುವಂತಿರಬೇಕು. ಸಿನಿಮಾದಲ್ಲಿ ಗ್ಲಾಮರ್ ಬೇಕು, ಹೌದು. ಆದರೆ ಇದರ ಹೊರತಾಗಿಯೂ ಒಟ್ಟು ಸಿನಿಮಾಗೆ ಒಂದು ಎಸೆನ್ಸ್ ಇರುತ್ತದಲ್ಲ, ಅದರಲ್ಲಿ ನನ್ನ ಪಾತ್ರ ಸೇರಿರಬೇಕು. ಪ್ರಬಲವಾಗಿರುವಂಥ ಪಾತ್ರಗಳು ನನಗೆ ತುಂಬಾ ಇಷ್ಟ. ನಾಯಕಿ ಎನ್ನುವ ಪದಕ್ಕೆ ಬಲ ತುಂಬುವಂಥ ಪಾತ್ರಗಳ ನಿರೀಕ್ಷೆ ನನ್ನಲ್ಲಿ ಇದ್ದೇ ಇದೆ.

◆ ಯಾವ ಧಾಟಿಯ ಕಥೆಗಳಲ್ಲಿ ಕಾಣಿಸಿಕೊಳ್ಳುವ ತುಡಿತವಿದೆ?

ಯಾವುದೇ ಒಂದು ಸ್ಕ್ರಿಪ್ಟ್ ಬಂದಾಗ ಮೊದಲು ನಾನು ಕಥೆಯನ್ನು ನೋಡುತ್ತೇನೆ. ಆಮೇಲೆ ನನ್ನ ಪಾತ್ರ ಹಾಗೂ ಆ ಪಾತ್ರವನ್ನು ಸಿನಿಮಾದಲ್ಲಿ ವಿನ್ಯಾಸಗೊಳಿಸಿರುವ ರೀತಿಯನ್ನು ನೋಡುತ್ತೇನೆ. ನನಗೆ ಲವ್‌ಸ್ಟೋರಿಗಳೆಂದರೆ ಇಷ್ಟ. ರೊಮ್ಯಾಂಟಿಕ್ ಕಾಮಿಡಿ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುವುದು ಇಷ್ಟ. ಇದರಲ್ಲಿ ಪರ್ಫಾರ್ಮೆನ್ಸ್‌ಗೆ ಹಲವು ಶೇಡ್‌ಗಳಿರುತ್ತವೆ. ಹಾರರ್ ಅಂದರೆ ಒಂದೇ ರೀತಿ, ಕಾಮಿಡಿ ಅಂದರೆ ಒಂದೇ ಪ್ರಕಾರದಲ್ಲಿ ಸಿನಿಮಾ ಸಾಗುತ್ತದೆ ಅನಿಸುತ್ತದೆ. ಆದರೆ ರಾಂಕಾಂನಲ್ಲಿ ಎಲ್ಲವೂ ಮಿಳಿತವಾಗಿರುತ್ತದೆ. ತುಂಬಾ ಎಕ್ಸ್‌ಪ್ರೆಸಿವ್ ಆಗಿ ನಟಿಸಬಹುದು.

◆ ಕನ್ನಡದೊಂದಿಗೆ ತೆಲುಗು ಸಿನಿಮಾಗಳಲ್ಲಿಯೂ ತೊಡಗಿಕೊಂಡಿದ್ದಿರಿ. ಆ ಅನುಭವಗಳು...

ತೆಲುಗು ಭಾಷೆಯಲ್ಲಿ ಕೋವಿಡ್‌ಗೆ ಮುಂಚೆ ಸಿನಿಮಾಗಳನ್ನು ಮಾಡಿದ್ದೆ. ಅದಾದ ಮೇಲೆ ಶಿಕ್ಷಣ ಪೂರ್ಣಗೊಳಿಸಬೇಕಿತ್ತು. ಕೊರೊನಾ ನಂತರ ಸಿನಿಮಾರಂಗದಲ್ಲಿ ತುಂಬಾ ಬೆಳವಣಿಗೆಗಳಾಯಿತು. ಮನರಂಜನಾ ಕ್ಷೇತ್ರದಲ್ಲಿದ್ದವರಿಗೆ ಹಿನ್ನಡೆಯಾಯಿತು. ಮರಳಿ ಮೊದಲಿನ ಸ್ಥಿತಿಗೆ ಬರಲು ತಡವಾಯಿತು ಕೂಡ. ನಂತರ ಕನ್ನಡದಲ್ಲಿ ಬ್ಯುಸಿಯಾದೆ. ಹೀಗಾಗಿ ಮತ್ತೆ ಅಲ್ಲಿ ಸಿನಿಮಾ ಮಾಡಿಲ್ಲ. ಭಾಷೆಯೊಂದು ಬಿಟ್ಟರೆ ಮತ್ತೇನೂ ಬೇರೆ ಅನ್ನಿಸಲಿಲ್ಲ.

◆ ನೀವು ಸಿನಿಮಾರಂಗಕ್ಕೆ ಬಂದು ಹಲವು ವರ್ಷಗಳಾದವು. ಹಿಂದಿರುಗಿ ನೋಡಿದರೆ ಏನನ್ನಿಸುತ್ತದೆ?

ಸಿನಿಮಾರಂಗಕ್ಕೆ ಕಾಲಿಟ್ಟು ಒಂಬತ್ತು ವರ್ಷಗಳಾಗಿವೆ. ಇಂಟೆನ್ಷನಲ್ ನಟಿ ಆಗಿರಲಿಲ್ಲ ನಾನು. ಈಗ ಈ ಕ್ಷೇತ್ರದಲ್ಲಿ ತುಂಬಾ ಕಲಿತಿದ್ದೇನೆ ಅನಿಸುತ್ತಿದೆ. ಕಲಿಯಬೇಕಾದ್ದು ಇನ್ನೂ ಸಾಕಷ್ಟಿದೆ. ನಟಿಯಾಗಿ ಹೇಗಿರಬೇಕು ಎಂಬ ಮೂಲ ಅಂಶಗಳನ್ನು ಕಲಿತುಕೊಂಡಿದ್ದೇನೆ. ದಿನೇ ದಿನೇ ಕಲಿಯುತ್ತಲೇ ಇದ್ದೇನೆ.

◆ ಮುಂದಿನ ಪ್ರಾಜೆಕ್ಟ್‌ಗಳು...

ಸದ್ಯ ‘ಕನಸೊಂದು ಶುರುವಾಗಿದೆ’ ಬಿಡುಗಡೆಯಾಗುತ್ತಿದೆ. ನಂತರ ‘ಮೋಡ ಕವಿದ ವಾತಾವರಣ’ ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಹಲವು ಜಾಹೀರಾತುಗಳಲ್ಲಿಯೂ ತೊಡಗಿಕೊಂಡಿದ್ದೇನೆ. ■